**ದಿನಾಂಕಃ 02.02.2026 ರಂದು ಸಾಕ್ಷಿದಾರರು ಹಾಜರಿದ್ದು, ಸಾಕ್ಷಿಗೆ ಸತ್ಯ ಪ್ರತಿಜ್ಞೆ ಮಾಡಿಸಲಾಯಿತು.**

**ಮುಖ್ಯ ವಿಚಾರಣೆಃ ವಾದಿ ಪರ ಶ್ರೀ ಎಂ.ವಿ. ವಕೀಲರಿಂದಃ–**

ನನಗೆ ವಾದಿ ಮತ್ತು ಪ್ರತಿವಾದಿ ಪರಿಚಯ ಇರುತ್ತಾರೆ. ಈ ದಿನ ನನ್ನ ಮುಖ್ಯ ವಿಚಾರಣೆಯ ಸಲುವಾಗಿ ಪ್ರಮಾಣ ಪತ್ರ ಸಲ್ಲಿಸಿದ್ದು, ಅವುಗಳನ್ನು ನಾನೇ ಹೇಳಿ ಬರೆಸಿದ್ದೇನೆ. ಅದರಲ್ಲಿರುವ ಸಹಿ ನನ್ನದೇ ಆಗಿರುತ್ತದೆ. ಅದರಲ್ಲಿರುವ ಅಂಶಗಳು ಸತ್ಯವಾಗಿರುತ್ತವೆ ಎಂದು ಪ್ರಮಾಣೀಕರಿಸುತ್ತೇನೆ.

ಸಾಕ್ಷಿಯು ನಿಪಿ–1 ಕ್ರಯದ ಕರಾರು ಪತ್ರದಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದರಿಂದ ಅದನ್ನು **ನಿಪಿ–1(ಎ ಮತ್ತು ಬಿ)** ಎಂದು ಗುರುತಿಸಲಾಯಿತು. ಸಾಕ್ಷಿಯು ನೋಡಿ ಗುರುತಿಸಿದ ವಾದಿ ಮಂಜುನಾಥ್‌ರವರ ಸಹಿಗಳನ್ನು **ನಿಪಿ–1(ಸಿ) ರಿಂದ (ಜಿ)** ಎಂದು ಗುರುತಿಸಲಾಯಿತು. ಸಾಕ್ಷಿಯು ನೋಡಿ ಗುರುತಿಸಿದ ಪ್ರತಿವಾದಿ ಕಾಂತಪ್ಪನವರ ಸಹಿಗಳನ್ನು **ನಿಪಿ–1(ಹೆಚ್) ರಿಂದ (ಕೆ)** ಎಂದು ಗುರುತಿಸಲಾಯಿತು. ನನ್ನ ಜೊತೆಯಲ್ಲಿ ಅಜಯ್‌ಕುಮಾರ್ ರವರು ಸಹಿ ಮಾಡಿರುತ್ತಾರೆ. ಸಾಕ್ಷಿ ನೋಡಿ ಗುರುತಿಸಿದ ಅಜಯ್ ಕುಮಾರ್ ರವರ ಸಹಿಗಳನ್ನು **ನಿಪಿ–1(ಎಲ್) ಮತ್ತು (ಎಂ)** ಎಂದು ಗುರುತಿಸಲಾಯಿತು. ನಿಪಿ–1 ನ್ನು ಕುಮಾರಸ್ವಾಮಿ ಎಂಬುವವರು ಬರೆದಿರುತ್ತಾರೆ. ಸಾಕ್ಷಿ ನೋಡಿ ಗುರುತಿಸಿದ ಕುಮಾರಸ್ವಾಮಿಯವರ ಸಹಿಯನ್ನು **ನಿಪಿ–1(ಎನ್)** ಎಂದು ಗುರುತಿಸಲಾಯಿತು.

**ಪಾಟೀ–ಸವಾಲುಃ ಪ್ರತಿವಾದಿ ಪರ ವಕೀಲರು ಪಾಟೀ–ಸವಾಲಿಗೆ ಕಾಲಾವಾಕಾಶ ಕೋರಿದ್ದರಿಂದ ಅವಕಾಶ ನೀಡಿ ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಮುಕ್ತ ಹೇಳಿಕೆ ಮತ್ತು ನನ್ನ ಉಕ್ತ ಲೇಖನಕ್ಕೆ ತಕ್ಕಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ

ಪ್ರಧಾನ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ., ಹಿರಿಯೂರು.